ಸಮುದ್ರದ ಅಲೆಗಳು

ಕತೆಃ ಮಾರ್ಗಾರೆಟ್ ಹೋಡ್ಜೆಸ್, ಚಿತ್ರಗಳುಃ ಬ್ಲೇರ ಲೆಂಟ

ಮಕ್ಕಳಿಗಾಗಲಿ ಹಿರಿಯರಿಗಾಗಲಿ, ಜೀವನ ಹಾಗು ಪ್ರಕೃತಿಗಳನ್ನು ಹಾಸುಹೊಕ್ಕಿನಂತೆ ಹೆಣೆದಿರುವ ಜಾನಪದ ಕತೆಗಳನ್ನು ಕೇಳುವದು ಬಹು ಇಷ್ಟ. ಇಂತಹದೇ ಒಂದು ಕತೆ ಸಮುದ್ರದ ಆಲೆಗಳು. ಈ ಮೂಲ ಜಪಾನದ ಲಾಫ್ಕಾಡಿಯೋ ಹರ್ನ ಇವರ ಕತೆಯನ್ನು ಮಾರ್ಗಾರೆಟ್ ಹೋಡ್ಜೆಸ್ ಹೇಳುತ್ತಿದ್ದಾರೆ.

ಇದು ಒಂದು ಮುಪ್ಪು ವಯಸ್ಸಿನ ಹಾಗು ಬಹು ಜಾಣನಾದ ಓಜಿಸಾನ ಎಂಬ ಅಜ್ಜನ ಮತ್ತು ಹುಡುಗಾಟಿಕೆಯ ಉತ್ಸಾಹ ಹಾಗು ಕಡಿಮೆ ತಿಳುವಳಿಕೆ ಇದ್ದ ತಾಡಾ ಎಂಬ ಮೊಮ್ಮಗನ ಕತೆ. ಇಲ್ಲಿ ನಿಸರ್ಗ ತನ್ನ ಕರಾಳ ರೂಪವನ್ನು ತೋರಿಸಲು ಸುಂಟರಗಾಳಿಯಲ್ಲಿ ಗರ್ಜಿಸುವ ಅಲೆಗಳಿಂದಾಗಿ ಊರ ಜನರೆಲ್ಲ ಸಾವಿನ ಬಾಯಿಗೆ ಹೋಗಬಹುದಾಗಿತ್ತು. ಜನರೆಲ್ಲ ಅಂಜಿ ನಡುಗುತ್ತಿದ್ದರು. ಇಂತಹ ನಾಟ್ಯಮಯ ಪ್ರಸಂಗದಲ್ಲಿ ಈ ಮುದಿ ಮನುಷ್ಯ ತನ್ನ ನೆಲ್ಲಿನ ಗದ್ದೆಗೆ ಬೆಂಕಿ ಹಚ್ಚಿ ಜನರೆಲ್ಲರಿಗೆ ಮುಂಬರುವ ಸಂಕಟದ ಬಗ್ಗೆ ಎಚ್ಚರಿಕೆ ಕೊಟ್ಟನು. ಮನುಷ್ಯ ತನ್ನ ಹೆಮ್ಮೆಗಾಗಿ ಹಾಗು ಪ್ರಕೃತಿಯ ಕೋಪಕ್ಕಾಗಿ ಏನೇನು ಮಾಡಬಹುದು ಎಂಬುದರ ಬಗ್ಗೆ ಈ ಕತೆ ಅಚ್ಚರಿ ಉಂಟು ಮಾಡುವದು.

ಜನಪದ ಕತೆಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಕತೆಗಾರನ ಮುಖದಿಂದ ಬಂದಿರುತ್ತವೆ. ಆದ್ದರಿಂದ ಇವುಗಳನ್ನು ಯಾರಾದರು ಓದಿ ಹೇಳುತ್ತಿದ್ದರೆ ಅವು ಸಾಕಷ್ಟು ಪರಿಣಾಮ ಬೀರುತ್ತವೆ. ಮಾರ್ಗಾರೆಟ್ ಹೋಡ್ಜೆಸ್ ಟಿವ್ಹಿಯಲ್ಲಿ ಬಿತ್ತರಿಸಿದ ಈ ಕತೆಗೆ ಬ್ಲೇರ ಲೆಂಟ ಇವನ ಚಿತ್ರಗಳು ಜಪಾನದ ಸೊಗಸನ್ನು ನಮ್ಮ ಮುಂದೆ ಇಡುತ್ತವೆ.



ಸಮುದ್ರದ ಅಲೆಗಳು

ಲಾಫ್ಕಾಡಿಯೋ ಹರ್ನ ಇವರ ಬುದ್ಧನ ಕತೆಗಳಿಂದ ಆಯ್ಕೆ ಮಾಡಲಾಗಿದೆ.

ಕತೆಃ ಮಾರ್ಗಾರೆಟ್ ಹೋಡ್ಜೆಸ್ ಚಿತ್ರಃ ಬ್ಲೇರ ಲೆಂಟ

ಕನ್ನಡಕ್ಕೆಃ ಪ್ರಭಾಕರ ನಾನಾವಟಿ

ಬಹಳ ಹಿಂದಿನ ಕಾಲದಲ್ಲಿ ಜಪಾನದಲ್ಲಿಯ ಸಮುದ್ರದ ದಂಡೆಯ ಮೇಲೆ ಒಂದು ಹಳ್ಳಿ ಇತ್ತು. ಸಮುದ್ರ ಶಾಂತವಿದ್ದಾಗ ಊರಿನ ಮಕ್ಕಳೆಲ್ಲ ಮೆಲ್ಲಗೆ ಬರುತ್ತಿರುವ ಸಮುದ್ರದ ಅಲೆಗಳಲ್ಲಿ ಆಟವಾಡುತ್ತಿದ್ದರು, ನಗೆದಾಡುತ್ತಿದ್ದರು, ಕೂಗಾಡುತ್ತಿದ್ದರು. ಆದರೆ ಕೆಲವೊಮ್ಮೆ ಸಮುದ್ರ ರೊಚ್ಚಿಗೆದ್ದಾಗ ರಾಕ್ಷಸನಂತಹ ಅಲೆಗಳು ದಂಡೆಗೆ ಅಪ್ಪಳಿಸುತ್ತ ಬರುತ್ತಿದ್ದವು. ಆ ಅಲೆಗಳು ಊರಿನ ಸೀಮೆಯನ್ನೇ ಅಳಿಸುತ್ತಿದ್ದವು. ಆಗ ಚಿಕ್ಕಮಕ್ಕಳು, ಅವರ ತಾಯಿ-ತಂದೆ ಸಮುದ್ರದ ದಂಡೆಯಿಂದ ದೂರ ಎಲ್ಲಿಯಾದರೂ ಸುರಕ್ಷಿತವಿದ್ದ ಸ್ಥಳದಲ್ಲಿ ಆಶ್ರಯ ಪಡೆದು ಸಮುದ್ರ ಶಾಂತವಾಗುವ ದಾರಿ ನೋಡುತ್ತ ಕುಳಿತುಕೊಳ್ಳುತ್ತಿದ್ದರು.

ಆ ಊರಿನ ಮಗ್ಗುಲಲ್ಲಿ ಒಂದು ಎತ್ತರವಾದ ಗುಡ್ಡವಿತ್ತು. ಗುಡ್ಡದ ಸುತ್ತಲು ಊರಲ್ಲಿಯ ಒಕ್ಕಲಿಗರ ಭತ್ತದ ಗದ್ದೆಗಳಿದ್ದವು. ಈ ಭತ್ತದ ಗದ್ದೆಗಳು ಊರಲ್ಲಿಯ ಜನರನ್ನು ಸಿರಿವಂತರಾಗಿ ಮಾಡುತ್ತಿದ್ದವು. ಎಲ್ಲರೂ ಮೈದುಡಿದು ಒಕ್ಕಲುತನ ಮಾಡುತ್ತಿದ್ದರು. ಮಳೆಗಾಲದ ಸುರಿಮಳೆಯಲ್ಲಿ ಮೈ ತೊಯಿಸಿಕೊಂಡು ಭತ್ತದ ಗದ್ದೆ ನೋಡುತ್ತಿದ್ದಾಗ ಇಡೀ ಗುಡ್ಡ ಹಚ್ಚು ಹಸುರಾದಂತೆ ಕಾಣುತ್ತಿತ್ತು. ಭತ್ತದ ಬೆಳೆ ಚೆನ್ನಾಗಿ ಬಂದಾಗ ಅದು ಬಂಗಾರದ ಬಣ್ಣದ್ದಾಗುತ್ತಿತ್ತು. ಸುಗ್ಗಿಯ ದಿನದಲ್ಲಿ ಒಕ್ಕಲಿಗರು ನಡ ಬಗ್ಗಿಸಿ ಭತ್ತದ ಬೆಳೆಯನ್ನು ಕೊಯ್ದು ಭತ್ತವನ್ನು ಬೇರ್ಪಡಿಸಿ ಮುಂಬರುವ ವರ್ಷಕ್ಕಾಗಿ ತೆಗೆದಿಡುತ್ತಿದ್ದರು. ಈ ಗುಡ್ಡದ ಬದಿಯಲ್ಲಿಯ ಊರು ಮತ್ತು ಸಮುದ್ರಗಳ ಸ್ವಲ್ಪ ದೂರದಲ್ಲಿ ಗುಡ್ಡದ ಮೇಲೆ ಓಜಿಸಾನ ಎಂಬ ಮುಪ್ಪಾದ ಮುದುಕ ಇರುತ್ತಿದ್ದನು. ಅವನ ಜತೆ ತಾಡಾ ಎಂಬ ಚಿಕ್ಕ ವಯಸ್ಸಿನ ಮೊಮ್ಮಗನು ಇರುತ್ತಿದ್ದನು.

ತಾಡಾನಿಗೆ ಅಜ್ಜನ ಮೇಲೆ ಸಾಕಷ್ಟು ಪ್ರೀತಿ. ಅಜ್ಜನ ಜಾಣತನ ಮತ್ತು ಅವನ ಮುದಿವಯಸ್ಸು ಇವುಗಳ ಮುಂದೆ ಆತ ತಲೆ ಬಾಗಿಸುತ್ತಿದ್ದನು. ಇವನಂತೆಯೇ ಊರಲ್ಲಿಯ ಜನ ಕೂಡ ಓಜಿಸಾನನನ್ನು ಆದರದಿಂದ ಕಾಣುತ್ತಿದ್ದರು. ಗುಡ್ಡದ ಮೇಲಿನ ಘಟ್ಟದ ಸುತ್ತುಮುತ್ತಾದ ದಾರಿ ದಾಟುತ್ತ ಓಜಿಸಾನನ ಸಲಹೆ ಕೇಳಲು ಬರುತ್ತಿದ್ದರು.





ಬಿಸಿಲುಗಾಲದ ಒಂದು ದಿನ ಓಜಿಸಾನ ತನ್ನ ಮನೆಯ ಬಾಲ್ಕನಿಯಲ್ಲಿ ನಿಂತು ಸುತ್ತಮುತ್ತಲಿನ ಭತ್ತದ ಗದ್ದೆಗಳನ್ನು ವೀಕ್ಷಿಸುತ್ತಿದ್ದನು. ಭತ್ತ ಪೂರ್ಣವಾಗಿ ಬೆಳೆದು ಸುಗ್ಗಿಗಾಗಿ ಕಾಯ್ದಂತೆ ನಿಂತ ಹಾಗೆ ಕಾಣುತ್ತಿತ್ತು. ಮೆಟ್ಟಲುಗಳಂತೆ ಕಾಣುವ ಉಳಿದ ಒಕ್ಕಲಿಗರ ಗದ್ದೆಗಳು ಕೂಡ ಬೆಳೆದು ನಿಂತಿದ್ದವು.

ಗುಡ್ಡದ ಕೆಳತುದಿಯಲ್ಲಿ ಸಮುದ್ರದ ದಂಡೆಯ ಮೇಲೆ ಹಳ್ಳಿಯಲ್ಲಿಯ 90 ಗುಡಿಸಲು – ಮನೆಗಳಿದ್ದವು. ಅಲ್ಲಿಯೇ ಒಂದು ಗುಡಿ ಕೂಡ ಇತ್ತು. ಈ ವರುಷ ಭತ್ತದ ಬೆಳೆ ಹುಲುಸಾಗಿ ಬೆಳೆದಿತ್ತು. ಒಕ್ಕಲಿಗರೆಲ್ಲ ಗುಡಿಯ ಎದುರಿನ ಜಾಗದಲ್ಲಿ ಹಾಡುತ್ತ, ಕುಣಿಯುತ್ತ ನಲಿದಾಡುತ್ತಿದ್ದರು.

ತಾಡಾ ಕೂಡ ಅಜ್ಜನ ಬದಿಗೆ ಬಂದು ಕೆಳಬದಿಯ ನೋಟವನ್ನು ನೋಡುತ್ತಿದ್ದನು.

ಗುಡಿಯಲ್ಲಿಯ ಬಿದಿರಿನ ಕಂಬಗಳನ್ನು ಬಣ್ಣ ಬಣ್ಣದ ಕಾಗದಗಳಿಂದ ಸಿಂಗರಿಸಲಾಗಿತ್ತು. ಕಾಗದದ ಪತಾಕೆಗಳನ್ನು ಸುತ್ತಮುತ್ತಲು ಹಚ್ಚಲಾಗಿತ್ತು. . ಬಿದಿರಿನ ಕೋಲಿಗೆ ಆಕಾಶಬುಟ್ಟಿಗಳನ್ನು ಜೋತುಬಿಡಲಾಗಿತ್ತು. ಬಿಸಿಲುಗಾಲದ ಗಾಳಿ ಬೀಸದೆ ಇದ್ದದ್ದರಿಂದ ಅವು ಹಾರಾಡುತ್ತಿರಲಿಲ್ಲ.
“ಇದು ಭೂಕಂಪದ ಮುನ್ಸೂಚನೆ!” ಓಜಿಸಾನ ಮನಸ್ಸಿನಲ್ಲಿಯೆ ಅಂದುಕೊಂಡನು.

ಅಷ್ಟರಲ್ಲಿ ಭೂಕಂಪದಿಂದಾಗಿ ನೆಲ ರಭಸದಿಂದ ಅಲ್ಲಾಡತೊಡಗಿತು. ತಾಡಾನಿಗೆ ಅದರ ಅಂಜಿಕೆ ಬರಲಿಲ್ಲ. ಏಕೆಂದರೆ ಜಪಾನಿನಲ್ಲಿ ಈ ರೀತಿಯ ಭೂಕಂಪಗಳು ಬರುತ್ತಲೇ ಇರುತ್ತವೆ. ಆದರೆ ಇದು ಮಾತ್ರ ಬಹು ವಿಚಿತ್ರವಾದ ಭೂಕಂಪ. ಈ ಭೂಕಂಪವು ಸಾಮಾನ್ಯ ಭೂಕಂಪವಾಗಿರಲಿಲ್ಲ. ಸಾಕಷ್ಟು ವೇಳೆ ನೆಲ ನಡುಗಿಸುವಂತಹದು. ಸಮುದ್ರದ ತಳದಿಂದಲೇ ಎದ್ದು ಬಂದ ಭೂಕಂಪ. ಮನೆ – ಗುಡಿಸಲುಗಳೆಲ್ಲ ನಡುಗುತ್ತಿದ್ದವು. ಅಲುಗಾಡುತ್ತಿದ್ದವು. ಕೆಲ ಕ್ಷಣವಾದ ಮೇಲೆ ಎಲ್ಲ ಸ್ತಬ್ಧವಾಗಿ ನಿಂತು ಬಿಟ್ಟವು.



ಭೂಕಂಪದ ತೀವ್ರತೆ ಕಡಿಮೆಯಾಗುತ್ತಿದ್ದಂತೆ ಓಜಿಸಾನನ ಮುದಿ ಕಣ್ಣುಗಳು ಸಮುದ್ರ ದಂಡೆಯನ್ನು ದಿಟ್ಟಿಸಿ ನೋಡತೊಡಗಿದವು. ನೀರೆಲ್ಲ ಕಪ್ಪಾಗತೊಡಗಿತು. ಹಳ್ಳಿಯ ಸುತ್ತಲು ನೀರೇ ನೀರು. ಸಮುದ್ರದ ದಂಡೆ ದೊಡ್ಡದಾಗತೊಡಗಿತು. ಆದರೆ ಸಮುದ್ರ ಮಾತ್ರ ದೂರ ದೂರ ಸರಿಯುತ್ತಿದ್ದಂತೆ ಕಾಣುತ್ತಿತ್ತು.

ಓಜಿಸಾನ ಮತ್ತು ತಾಡಾ ಇವರು ದೂರದಲ್ಲಿ ಚಿಕ್ಕ ಚಿಕ್ಕದಾಗಿ ಕಾಣುವ ಗುಡಿ ಮತ್ತು ಜನಜಂಗುಳಿಯನ್ನು ನೋಡುತ್ತಲಿದ್ದರು. ಎಲ್ಲರೂ ದಂಡೆಯ ಮೇಲೆ ನೆರೆದಿದ್ದರು. ಸಮುದ್ರದ ನೀರು ದೂರ ಸರಿಯುತ್ತಿತ್ತು. ದಂಡೆಯ ಮೇಲಿನ ಉಸುಕಿನ ರಾಶಿ ಹಾಗು ಕಲ್ಲಿನ ಬಂಡೆಗಳು, ಸಮುದ್ರದ ತಳದಲ್ಲಿಯ ಸಸಿ-ಗಿಡ ಮುಂತಾದವುಗಳೆಲ್ಲ ಕಾಣತೊಡಗಿದ್ದವು. ನೆರೆದ ಜನರಿಗೆ ಇದು ಒಂದು ಸೋಜಿಗದ ದೃಶ್ಯವಾಗಿತ್ತು.





ಆದರೆ ಓಜಿಸಾನನಿಗೆ ಇದರ ರಹಸ್ಯ ಗೊತ್ತಿತ್ತು. ಇದಕ್ಕೂ ಮೊದಲು ಇದೇ ರೀತಿಯ ಪ್ರಸಂಗವನ್ನು ಅವನು ಅನುಭವಿಸಿದ್ದನು. ಅವನಿಗೆ ಈ ಸಮುದ್ರ ಏನು ಮಾಡಬಹುದು ಎಂಬುದನ್ನು ಜನರಿಗೆ ತಿಳಿಸಬೇಕಾಗಿತ್ತು. ಆದರೆ ಗುಡ್ಡಗಾಡಿನ ಸುತ್ತುಸುತ್ತಾದ ಘಟ್ಟದ ದಾರಿಯಿಂದ ಕೆಳಗಿಳಿದು ಆ ಜನರ ಗುಂಪಿನವರೆಗೆ ಮುಟ್ಟುವಷ್ಟು ಸಮಯವಿರಲಿಲ್ಲ. ಕೆಲ ಕ್ಷಣ ನಿಂತು ಏನು ಮಾಡಬಹುದು ಎಂಬುದರ ಯೋಚನೆ ಮಾಡುವಷ್ಟು ಕೂಡ ವೇಳೆ ಇರಲಿಲ್ಲ. ಏನಾದರೂ ತೀವ್ರವಾಗಿ ಮಾಡಲೇ ಬೇಕು. ಅವನು ತಾಡಾನನ್ನು ಕರೆದು "ಒಳಗೆ ಹೋಗು, ಮತ್ತು ದೀವಟಿಗೆಯನ್ನು ಬೇಗನೆ ತೆಗೆದುಕೊಂಡು ಬಾ." ಎಂದು ಹೇಳಿದನು.
ತಾಡಾ ಮನೆಯೊಳಗೆ ಓಡೋಡುತ್ತ ಹೋಗಿ ದೀವಟಿಗೆಯನ್ನು ಅಜ್ಜನ ಕೈಯಲ್ಲಿ ಕೊಟ್ಟನು. ಓಜಿಸಾನನು ಅದಕ್ಕೆ ಉರಿ ಹಚ್ಚಿದನು.

ಮುದಿ ಓಜಿಸಾನನು ಹುಲುಸಾಗಿ ಬೆಳೆದು ನಿಂತಿರುವ ತನ್ನ ಗದ್ದೆಯ ಹತ್ತಿರ ಹೋಗಿ ನಿಂತನು. ಇಡೀ ವರುಷ ದುಡಿದು ಬೆಳೆಸಿದ ಬೆಳೆ. ಮುಂದಿನ ವರುಷದ ಅನ್ನ. ನೋಡು ನೋಡುವಷ್ಟರಲ್ಲಿ ಮುದಿ ಓಜಿಸಾನನು ದೀವಟಿಗೆಯಿಂದ ಭತ್ತದ ಬೆಳೆಗೆ ಉರಿ ಹಚ್ಚಿದನು. ಭತ್ತದ ಹುಲ್ಲು ಸುಡತೊಡಗಿತು. ಭತ್ತದಲ್ಲಿಯ ಅಕ್ಕಿಗಳು ಹೊರಬಂದು ಮೆತ್ತಗಾಗತೊಡಗಿದವು. ಬೆಂಕಿ ಧುತ್ತೆಂದು ಚಿಮ್ಮತೊಡಗಿತು. ಓಜಿಸಾನನ ಭತ್ತದ ಗದ್ದೆಯ ಬಂಗಾರದ ಬಣ್ಣ ಮಾಯವಾಗಿ ಕಪ್ಪಾಗತೊಡಗಿತು. ಹೊಗೆ ಆಕಾಶದೆತ್ತರ ಹಬ್ಬತೊಡಗಿತು. ಹೊಗೆ ಮೋಡಗಳು ಮುಗಿಲಲ್ಲಿ ಕಾಣತೊಡಗಿದವು.

ತಾಡಾನಿಗೆ ಅಳುಕು. ತನ್ನ ಅಜ್ಜ ಹೀಗೇಕೆ ಮಾಡಿದ ಎಂಬುದರ ಆಚ್ಚರಿ. ಅಜ್ಜನ ಹತ್ತಿರ ಹೋಗಿ ಅವನನ್ನು ಅಪ್ಪಿಕೊಂಡು "ಹೀಗೇಕೆ ಮಾಡಿದೆ? ಏಕೆ..? ಏಕೆ...? ಎಂದು ದುಂಬಾಲಿ ಬಿದ್ದು ಚೀರುತ್ತ ಕೇಳತೊಡಗಿದನು.
ಓಜಿಸಾನ ಉತ್ತರ ಕೊಡದೆ ಸುಮ್ಮನಿದ್ದನು. ತಾಡಾನಿಗೆ ತಿಳಿಸಿ ಹೇಳುವಷ್ಟು ಕೂಡ ಈಗ ಸಮಯವಿರಲಿಲ್ಲ. ವೇಳೆ ಕಳೆದರೆ ಸಮುದ್ರದ ಹೊಡೆತದಿಂದ ನೂರಾರು ಜನರ ಜೀವ ಹೋಗಬಹುದಿತ್ತು. ಜನರನ್ನು ಸಾವಿನ ಬಾಯಿಯಿಂದ ಉಳಿಸಲೇಬೇಕು ಎಂಬ ವಿಚಾರವೇ ಅವನ ತಲೆ ತುಂಬಿತ್ತು.
ಓಜಿಸಾನ ಗದ್ದೆಯ ಮತ್ತೊಂದು ತುದಿಗೆ ಓಡೋಡುತ್ತ ಹೋಗಿ ಬೆಂಕಿ ಇಡತೊಡಗಿದನು. ತನ್ನ ಗದ್ದೆಯ ಕೊನೆ ಮುಟ್ಟುವವರೆಗೆ ಎಲ್ಲ ಬದಿಯಿಂದಲೂ ಭತ್ತದ ಸೂಡೆಗಳನ್ನು ಸುಡತೊಡಗಿದನು. ಆ ಮೇಲೆ ಉರಿಯುವ ದೀವಟಿಗೆಯನ್ನು ದೂರ ಎಸೆದು ದಾರಿ ಕಾಯತೊಡಗಿದನು.

ಗುಡ್ಡದ ಕೆಳಗಿನ ಗುಡಿಯ ಹಂದರದಲ್ಲಿದ್ದ ಪೂಜಾರಿಗಳೆಲ್ಲ ಗುಡ್ಡದ ಮೇಲಿನ ಗದ್ದೆಗೆ ಬೆಂಕಿ ತಗಲಿದ್ದನ್ನು ಕಂಡು ಹೌಹಾರಿದರು. ಊರವರಿಗೆ ಎಚ್ಚರಿಕೆ ಕೊಡಲೆಂದು ಜೋರುಜೋರಾಗಿ ಗುಡಿಯಲ್ಲಿದ್ದ ಗಂಟೆಗಳನ್ನು ಬಾರಿಸತೊಡಗಿದರು. ಜನರೆಲ್ಲ ಇರುವೆಯಂತೆ ಉಸುಕಿನಲ್ಲಿ ಕಾಲೆಳೆಯುತ್ತ ಗುಡಿಯ ಕಡೆ ಹೋಗತೊಡಗಿದ್ದರು.

"ಬನ್ನಿ, ಬೇಗ ಬನ್ನಿ..." ಓಜುಸಾನ ಕೂಗತೊಡಗಿದನು. ಆದರೆ ಜನರೆಲ್ಲ ಸಾಕಷ್ಟು ದೂರವಿದ್ದದ್ದರಿಂದ ಅವನ ಕೂಗು ಯಾರಿಗೂ ಕೇಳಬರಲಿಲ್ಲ.



ಸೂರ್ಯ ಮುಣುಗತೊಡಗಿದ್ದನು. ಸಂಜೆಯ ಕತ್ತಲು ಕವಿಯತೊಡಗಿತು. ದೂರದಲ್ಲಿ ಸಮುದ್ರ ಕಾಣುತ್ತಲಿತ್ತು. ಉಸುಕಿನ ದಂಡೆಯ ಭೂಮಿ ಹೆಚ್ಚುತ್ತಲಿತ್ತು.
ಓಜುಸಾನನಿಗೆ ಬಹಳ ವೇಳೆ ಕಾಯ ಬೇಕಾಗಲಿಲ್ಲ. ಜನ ಗುಡ್ಡ ಹತ್ತುತ್ತಿತ್ತುರುವದನ್ನು ಅವನು ನೋಡಿದನು. ಕೆಲ ಜನ ಓಡೋಡುತ್ತ ಬಂದು ಬೆಂಕಿಯನ್ನು ಆರಿಸಲು ಸಜ್ಜಾದರು. ಆದರೆ ಮುದಿ ಓಜಿಸಾನ ಅವರನ್ನು ತಡೆಹಿಡಿದನು.
ಬೆಂಕಿ ಉರಿಯುತ್ತಲೇ ಇತ್ತು. "ಅದು ಉರಿಯಲಿ. ಇನ್ನಷ್ಟು ರಭಸದಿಂದ ಉರಿಯಲಿ. ಊರವರೆಲ್ಲ ಇಲ್ಲಿ ಬಂದು ಮುಟ್ಟುವವರೆಗೆ ಉರಿಯಲಿ. ನಮ್ಮ ಮೇಲೆ ದೊಡ್ಡ ಸಂಕಟ ಬೀಳಲಿದೆ. ಅದರಿಂದ ಪಾರಾಗಬೇಕು." ಎಂದು ಓಜಿಸಾನ ಬಂದವರೆದುರಿಗೆ

ಹೇಳತೊಡಗಿದನು.

ಊರಲ್ಲಿಯ ಎಲ್ಲ ಜನ – ತರುಣ ತರುಣಿಯರು, ನಡುವಯಸ್ಸಿನ ಗಂಡಸರು, ಹೆಂಗಸರು ಓಡೋಡುತ್ತ ಗುಡ್ಡ ಹತ್ತತೊಡಗಿದರು. ಚಿಕ್ಕ ಮಕ್ಕಳು, ಕೂಡ ಬೇಗಬೇಗನೆ ಹೆಜ್ಜೆ ಇಡುತ್ತ ಗುಡ್ಡ ಹತ್ತಿದರು. ಮುದಿ ವಯಸ್ಸಿನವರು ಮೆಲ್ಲ ಮೆಲ್ಲಗೆ ಬರುತ್ತಿದ್ದದ್ದು ಕಾಣುತ್ತಿತ್ತು. ತರುಣರು ಮತ್ತು ಮಕ್ಕಳು ಬೆಂಕಿಯನ್ನು ನಂದಿಸಲೆಂದು ಬಕೆಟ್ಟಿನಲ್ಲಿ ನೀರು ತುಂಬತೊಡಗಿದರು. ಏನೇ ಆದರೂ ಈಗ ಬೆಂಕಿಯನ್ನು ನಂದಿಸಲು ಯಾರಿಗೂ ಶಕ್ಯವಾಗದು. ಎಲ್ಲರು ಈ ಮುದಿ ವಯಸ್ಸಿನ ಓಜಿಸಾನನ ಮುಖವನ್ನು ದಿಟ್ಟಿಸಿ ನೋಡತೊಡಗಿದರು. ಸಂಜೆಯಾಗುತ್ತಲಿತ್ತು.

ತಾಡಾ ಓಡೋಡುತ್ತ ಮನೆಯಿಂದ ಹೊರ ಬಂದನು. “ನನ್ನ ಅಜ್ಜನ ತಲೆ ತಿರುಗಿದೆ. ಅವನು ಅಳುದನಿಯಲ್ಲಿ ಹೇಳತೊಡಗಿದನು. ಅವನೇ ತನ್ನ ಈ ಕೈಗಳಿಂದ ಗದ್ದೆಗೆ ಉರಿ ಹಚ್ಚಿದನು. ನಾನೇ ನನ್ನ ಈ ಕಣ್ಣುಗಳಿಂದ ನೋಡಿದ್ದೇನೆ.”

ತಾಡಾನ ಮಾತುಗಳನ್ನು ಅಲಕ್ಷಿಸುತ್ತ “ಎಲ್ಲ ಜನ ಬಂದಿದ್ದಾರೆಯೆ?” ಎಂದು ಜನರನ್ನು ಕೇಳತೊಡಗಿದನು. ಜನರೆಲ್ಲ ರೊಚ್ಚಿಗೆದ್ದಿದ್ದರು. ಆದರೂ “ಎಲ್ಲರು ಬಂದಿದ್ದಾರೆ.” ಎಂದು ಮೆಲುದನಿಯಲ್ಲಿ ಹೇಳಿದರು. *ಈ ಮುದುಕನಿಗೆ ಹುಚ್ಚು ಹಿಡಿದಿದೆ. ಉಳಿದ ಗದ್ದೆಗಳಿಗೂ ಕೂಡ ಈತ ಬೆಂಕಿ ಹಚ್ಚಬಹುದು.* ಎಂದು ಪಿಸುದನಿಯಲ್ಲಿ ಮಾತಾಡತೊಡಗಿದರು. ಎಲ್ಲರೂ ಮುಷ್ಟಿಯನ್ನು ಮುಚ್ಚಿ ಬೆದರಿಸುವಂತೆ ಓಜಿಸಾನನನ್ನು ನೋಡತೊಡಗಿದರು. ಓಜಿಸಾನ ಕೈ ಮೇಲೆತ್ತಿ , “ನೋಡಿರಲ್ಲಿ! ....” ಎಂದು ಜೋರಾಗಿ ಧ್ವನಿ ಮಾಡಿ ಹೇಳಿದನು. ಮುಸ್ಸಂಜೆಯ ಕತ್ತಲಲ್ಲಿ ದೂರ ಕ್ಷಿತಿಜದ ಹತ್ತರ ಒಂದು ಗೆರೆಯಂತೆ ಏನೋ ಕಾಣುತ್ತಿತ್ತು. ಆದರೆ ಅಲ್ಲಿ ಸಮುದ್ರದ ದಂಡೆ ಇರಲಿಲ್ಲ. ಅದು ದೊಡ್ಡದಾಗತೊಡಗಿತು. ಅದು ಕಪ್ಪುಕಪ್ಪಾಗಿ ಕಾಣುತ್ತಿತ್ತು. ಮೆಲ್ಲಮೆಲ್ಲಗೆ ಮುಂದೆ ಮುಂದೆ ಸರಿಯುತ್ತಿತ್ತು. ಕರಿ ಕತ್ತಲು ಮುಂದೆ ಸರಿಯುತ್ತಲಿತ್ತು. ನಿಜವಾಗಿ ನೋಡಿದರೆ ಇದು ಸಮುದ್ರವೇ. ಸುಂಟರಗಾಳಿ ಮುಂದೆ ಮುಂದೆ ಸರಿಯುತ್ತಿದ್ದ ಹಾಗೆ ಅದು ಕಾಣುತ್ತಿತ್ತು.



“ಸಮುದ್ರದ ಉಬ್ಬರದ ಅಲೆಗಳು...” ಜನ ಒಂದೇ ದನಿಯಲ್ಲಿ ಕೂಗತೊಡಗಿದರು. ಮೊದಲಿನ ದನಿ, ಪಿಸುಮಾತುಗಳು, ಸಪ್ಪಳ ಮಾಯವಾದವು. ಎಲ್ಲ ಕಿವಿಗಳು ಉಬ್ಬರದ ದನಿ ಕೇಳಲು ಆತುರಗೊಂಡಿದ್ದವು. ಸಿಡಿಲಿನ ಸಪ್ಪಳ ಮಾಡುತ್ತ ಅಲೆಗಳು ಗುಡ್ಡದ ಮೇಲೆ ಅಪ್ಪಳಿಸತೊಡಗಿದವು.



ಮಿಂಚು ಹೊಳೆದಂತೆ ಅಲೆಗಳಲ್ಲಿಯ ನೊರೆ ಹೊಳೆಯುತ್ತಿತ್ತು. ಮುಂದೆ ಕೆಲ ಕ್ಷಣ ಅದು ಮಾಯವಾಯಿತು. ಆದರೆ ಆ ಬಿರುಗಾಳಿಯು ಗುಡ್ಡವನ್ನು ಎಲ್ಲ ಬದಿಯಿಂದಲೂ ಮುತ್ತುತ್ತಲಿತ್ತು. ಗುಡ್ಡವನ್ನೇ ನುಂಗುವಂತಹ ಅದರ ಆರ್ಭಟೆ. ಜನರೆಲ್ಲ ಅಂಜಿ ಚೆಲ್ಲಾಪಿಲ್ಲಿಯಾಗಿ ಓಡಾಡತೊಡಗಿದರು.



ಅವರು ಮತ್ತೊಮ್ಮೆ ದಂಡೆಯ ಮೇಲೆ ಕಣ್ಣು ಹಾಯಿಸಿದಾಗ ಅವರ ಮನೆಗಳಿದ್ದ ಜಾಗವನ್ನು ಸಮುದ್ರ ನುಂಗಿಬಿಟ್ಟಿತ್ತು. ಭೋರ್ಗರೆಯುವ ದನಿ ಮತ್ತು ನೆಲವನ್ನೇ ಮೇಲೆತ್ತಿ ಅಪ್ಪಳಿಸಿತ್ತಿರುವಂತಹ ಗರ್ಜನೆ. ಪ್ರಚಂಡ ಗಾಳಿ ಬೀಸುವದು ಮುಗಿದಂತೆಯೆ ಸಮುದ್ರ ಹಿಂತಿರುಗುತ್ತ ತನ್ನ ಮೊದಲಿನ ದಂಡೆ ಇದ್ದಲ್ಲಿ ಹೋಗಿ ನಿಂತಿತು. ಆದರೆ ಅದರ ಅರ್ಭಟೆ ತುಸು ಕೂಡ ಕಡಿಮೆಯಾಗಿರಲಿಲ್ಲ.



ಓಜಿಸಾನ ಒಂದು ಶಬ್ದ ಕೂಡ ಮಾತಾಡಲಿಲ್ಲ. ಎಲ್ಲರು ಗುಡ್ಡದ ಕೆಳಬದಿಗೆ ನಡೆದಿದ್ದ ಸಮುದ್ರದ ರೌದ್ರರೂಪವನ್ನು ನೋಡುತ್ತಲಿದ್ದರು. ಸಮುದ್ರ ಗುಡ್ಡದ ಕೆಳಗಿನ ಬಂಡೆಗಲ್ಲುಗಳ ಮೇಲೆ ಅಪ್ಪಳಿಸುತ್ತಿತ್ತು. ಮನೆ-ಗುಡಿಸಲುಗಳೆಲ್ಲ ಬಿದ್ದು ಹೋಗಿದ್ದವು. ಗುಡಿಯು ಬಿದ್ದು ಹೋಗಿತ್ತು. ಅಲ್ಲಿ ಹಳ್ಳಿಯ ಅಂಶವೇ ಇರಲಿಲ್ಲ. ಮನೆ ಚಪ್ಪರದ ಹುಲ್ಲಿನ ಸೂಡುಗಳು ಎಲ್ಲ ಕಡೆಗೂ ಹರವಿಕೊಂಡಿದ್ದವು.

“ಇದಕ್ಕಾಗಿಯೇ ನಾನು ಬೆಳೆದು ನಿಂತ ನೆಲ್ಲಿನ ಗದ್ದೆಗೆ ಬೆಂಕಿ ಇಟ್ಟಿದ್ದೆ.” ಓಜಿಸಾನನ ದನಿ.



ಅವರೆಲ್ಲರ ಈ ಮುದಿ ಸಂಗಡಿಗ ಈಗ ಕಡು
ಬಡವನಾಗಿದ್ದ. ಇಡೀ ವರುಷದ ಆದಾಯವೆಲ್ಲ ಬೆಂಕಿ
ಪಾಲಾಗಿತ್ತು. ಆದರೆ ನೂರಾರು ಜನರ ಜೀವ ಉಳಿಸಿದ
ಹೆಮ್ಮೆ ಅವನಲ್ಲಿತ್ತು. ಟಾಡಾ ಓಡಿ ಬಂದು ಅಜ್ಜನ
ಕೈಹಿಡಿದು ಸವರಿಸತೊಡಗಿದನು. ನೆರೆದ ಎಲ್ಲ ಜನ
ಓಜಿಸಾನನ ಎದುರು ಬಂದು ನಡ ಬಗ್ಗಿಸಿ
ವಂದಿಸತೊಡಗಿದರು.
“ನನ್ನ ಮನೆ ಇನ್ನು ಗಟ್ಟಿ ಮುಟ್ಟಾಗಿ ನಿಂತಿದೆ. ನೀವೆಲ್ಲರು
ಇಲ್ಲಿ ಇರಬಹುದು.” ಎಂದು ಹೇಳುತ್ತ ಮನೆ ಬಾಗಿಲನ್ನು
ತೆರೆದು ಎಲ್ಲರನ್ನು ಸ್ವಾಗತಿಸಿದನು.



ಆ ಊರಿನವರಿಗೆ ಒಳ್ಳೆಯ ದಿನಗಳು ಬಂದಾಗ ಓಜಿಸಾನನು ಅವರ ಮೇಲೆ ಮಾಡಿದ ಉಪಕಾರವನ್ನು ಅವರು ಎಂದೂ ಮರೆಯಲಾರರು. ಅವರಿಗೆ ಅವನ ಸಿರಿವಂತಿಕೆಯನ್ನು ಮರುಳಿ ಕೊಡಲು ಶಕ್ಯವಿರಲಿಲ್ಲ. ಆದರೆ ಎಲ್ಲ ಜನರು ತಮ್ಮ ತಮ್ಮ ಮನೆಗಳನ್ನು ಕಟ್ಟುವಾಗ ಅವನ ಗೌರವಕ್ಕೆಂದು ಒಂದು ಮಂದಿರವನ್ನು ಕಟ್ಟಿದರು.
ಅವನ ಆ ಮಂದಿರ ಇನ್ನೂ ಅಲ್ಲಿ ಇದೆ. ಮುದಿ ಒಕ್ಕಲಿಗರಿಗೆ ಆ ಕತೆ ಇನ್ನೂ ನೆನಪಿದೆ. ಸುಂಟರಗಾಳಿ ಬೀಸಿ ಅವರ ಮನೆಗಳನ್ನೆಲ್ಲ ನೆಲೆಸಮ ಮಾಡಿದ ಆ ಅನಾಹುತವನ್ನು ಅವರೂ ಎಂದೂ ಮರೆಯಲಾರರು.